5ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ದ.ಕ., ಮಂಗಳೂರು,
ಕಾರ್ಯನಿರ್ವಹಣೆ, ಪುತ್ತೂರು, ದ.ಕ.

## ಸೆಷನ್ಸ್ ಕೇಸ್ ನಂಬ್ರ **5017/2018**

| | | | |
|---|---|---|---|
| ಸಾಕ್ಷಿದಾರರ ಹೆಸರು | : | ಮೋಹನ್ | ಪ್ರಾಸಾಃ 13 |
| ತಂದೆಯ ಹೆಸರು | : | ಕುಂಞಿ ಪೂಜಾರಿ | ಚಾಸಾಃ 16 |
| ಪ್ರಾಯ | : | 42 ವರ್ಷ | ದಿನಾಂಕಃ **24.10.2024** ರಂದು ಸಾಕ್ಷಿದಾರರಿಗೆ ಪ್ರಮಾಣವಚನ ಬೋಧಿಸಲಾಯಿತು. |
| ಉದ್ಯೋಗ | : | ಎಲೆಕ್ಟ್ರಿಶಿಯನ್ | |
| ವಾಸಸ್ಥಳ | : | ಮುಳಿಪಡ್ಪು ಮನೆ, ಪಡುವನ್ನೂರು ಗ್ರಾಮ, ಪುತ್ತೂರು ತಾಲೂಕು. | |

ಮುಖ್ಯ ವಿಚಾರಣೆಃ ಮಾನ್ಯ ಸರಕಾರಿ ಅಭಿಯೋಜಕರಿಂದಃ

ನನಗೆ ಪ್ರಾಸಾ.2 ರವರ ಪರಿಚಯ ಇದ್ದು, ಅವರು ನಮ್ಮ ಪಕ್ಕದ ಮನೆಯವರಾಗಿರುತ್ತಾರೆ.

2. ಸಾಕ್ಷಿಗೆ ಒಂದು ದಾಖಲೆಯನ್ನು ತೋರಿಸಲಾಗಿ, ಸಾಕ್ಷಿಯು ಸದರಿ ದಾಖಲೆಯಲ್ಲಿರುವ ತನ್ನ ಸಹಿಯನ್ನು ನೋಡಿ ಗುರುತಿಸಿದ್ದು, ಸದರಿ ದಾಖಲೆಯು ಸ್ವತ್ತು ಸ್ವಾಧೀನತಾ ಮಹಜರು ಆಗಿದ್ದು, ಅದನ್ನು ಈಗಾಗಲೇ ನಿಶಾನೆ ಪಿ-9 ಎಂದು ಗುರುತಿಸಲಾಗಿದ್ದು, ಅದರಲ್ಲಿರುವ ಸಾಕ್ಷಿಯ ಸಹಿಯನ್ನು ನಿಪಿ-9(ಬಿ) ಎಂದು ಗುರುತಿಸಲಾಯಿತು. ಸದರಿ ದಾಖಲೆಯಲ್ಲಿ ಏನು ಬರೆದಿರುತ್ತಾರೆ ಎಂಬುದರ ಬಗ್ಗೆ ನನಗೆ ಯಾವುದೇ ಮಾಹಿತಿ ಇರುವುದಿಲ್ಲ. ನಾನು ಅದನ್ನು ಓದಿ ನೋಡಿರುವುದಿಲ್ಲ ಮತ್ತು ಅದೇ ರೀತಿ ಪೊಲೀಸರಿಗೆ ನನಗೆ ಅದನ್ನು ಓದಿ ತಿಳಿಸಿರುವುದಿಲ್ಲ. ನಾನು ಸುಮಾರು 7 - 8 ವರ್ಷಗಳ ಪೂರ್ವದಲ್ಲಿ ಪುತ್ತೂರು ಗ್ರಾಮಾಂತರ ಪೊಲೀಸ್ ಠಾಣೆಯ ಪೊಲೀಸರು ನನಗೆ ನೋಟೀಸನ್ನು ನೀಡಿ ಬಂದು ದಾಖಲೆಗೆ ಸಹಿ ಮಾಡುವಂತೆ ತಿಳಿಸಿದ್ದು, ಆ ಮೇರೆಗೆ ನಾನು ಠಾಣೆಯಲ್ಲಿ ಸದರಿ ದಾಖಲೆಗೆ ಸಹಿ ಮಾಡಿರುತ್ತೇನೆ. ಸದರಿ ದಾಖಲೆಗೆ ನಾನು ಒಬ್ಬನೇ ಸಹಿ ಮಾಡಿರುತ್ತೇನೆ. ಆ ಸಮಯದಲ್ಲಿ ನಾನು ಯಾವುದೇ ವಾಹನವನ್ನು ನೋಡಿರುವುದಿಲ್ಲ.

ನಾನು ಸಹಿ ಮಾಡುವ ಕಾಲಕ್ಕೆ ಪ್ರಾಸಾ.2 ರವರು ಠಾಣೆಯಲ್ಲಿದ್ದರು. ನಿಶಾನೆ ಪಿ-10 ಛಾಯಾಚಿತ್ರದಲ್ಲಿ ಕಂಡು ಬರುವ ಮೋಟಾರುಸೈಕಲ್ ನಂಬರ್ ಕೆಎ-21/ಆರ್-1244 ನೇದ್ದನ್ನು ನಾನು ಈ ಹಿಂದೆ ಎಲ್ಲಿಯೂ ನೋಡಿರುವುದಿಲ್ಲ.

(ಈ ಹಂತದಲ್ಲಿ ಸರಕಾರಿ ಅಭಿಯೋಜಕರು ಈ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿ ಕೋರಿದ್ದಾರೆ. ಕಡತವನ್ನು ಪರಿಶೀಲಿಸಿ, ಸರಕಾರಿ ಅಭಿಯೋಜಕರ ಮನವಿಯನ್ನು ಪುರಸ್ಕರಿಸಿ, ಪಾಟೀ ಸವಾಲು ಮಾಡಲು ಅನುಮತಿಯನ್ನು ನೀಡಲಾಯಿತು.)

<u>ಪಾಟೀ ಸವಾಲುಃ ಮಾನ್ಯ ಸರಕಾರಿ ಅಭಿಯೋಜಕರಿಂದಃ</u>

2. ದಿನಾಂಕ 17.11.2015 ರಂದು ಪ್ರಾಸಾ.2 ರವರು ಪುತ್ತೂರು ಗ್ರಾಮಾಂತರ ಪೊಲೀಸ್ ಠಾಣೆಯಲ್ಲಿ ದಿನಾಂಕ 14.11.2015 ರಂದು ಅವರು ಸವಾರಿ ಮಾಡಿಕೊಂಡು ಹೋಗುತ್ತಿದ್ದ ಮೋಟಾರುಸೈಕಲ್ ನಂಬರ್ ಕೆಎ-21/ಆರ್-1244 ನೇದ್ದನ್ನು ಹಾಜರುಪಡಿಸಿದ್ದು, ಅದನ್ನು ನನ್ನ ಸಮಕ್ಷಮ ನಿಶಾನೆ ಪಿ-9 ರಂತೆ ಬೆಳಿಗ್ಗೆ 9.00 ಗಂಟೆಯಿಂದ 9.20 ಗಂಟೆಯ ವರೆಗೆ ಮಹಜರು ಮುಖೇನ ವಶಪಡಿಸಿಕೊಂಡು ಅದನ್ನು ಓದಿ ಹೇಳಿ ನನ್ನ ಸಹಿಯನ್ನು ಪಡೆದುಕೊಂಡಿರುತ್ತಾರೆ ಎಂದರೆ ಸರಿಯಲ್ಲ. ಆ ಸಮಯದಲ್ಲಿ ನಾನು ನಿಶಾನೆ ಪಿ-10 ರಲ್ಲಿ ಕಂಡು ಬರುವ ಮೋಟಾರುಸೈಕಲನ್ನು ನೋಡಿರುತ್ತೇನೆ ಎಂದರೆ ಸರಿಯಲ್ಲ.

3. ಪ್ರಸ್ತುತ ಪ್ರಾಸಾ.2 ರವರು ಮೃತಪಟ್ಟಿದ್ದಾರೆ. ಪ್ರಾಸಾ.2 ರವರು ಮೃತಪಟ್ಟಿದ್ದರಿಂದ ಮತ್ತು ಆರೋಪಿತರು ನನ್ನ ಪರಿಚಯಸ್ಥರಾಗಿರುವುದರಿಂದ ಅವರಿಗೆ ಸಹಾಯ ಮಾಡುವ ಉದ್ದೇಶದಿಂದ ನ್ಯಾಯಾಲಯದಲ್ಲಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

<u>ಪಾಟೀ ಸವಾಲುಃ **1** ಮತ್ತು **2**ನೇ ಆರೋಪಿತರ ಪರ ಶ್ರೀ ಎಂ.ವಿ.ಜಿ. ವಕೀಲರಿಂದಃ</u>

4. ನಾನು ಪೊಲೀಸ್ ಠಾಣೆಯಲ್ಲಿ ಪ್ರಾಸಾ.2 ರವರನ್ನು ಮಾತನಾಡಿಸಿರುವುದಿಲ್ಲ. ನಾವಿಬ್ಬರು ಒಟ್ಟಿಗೆ ಯಾವುದೇದಾಖಲೆಗೆ ಸಹಿ ಮಾಡಿರುವುದಿಲ್ಲ.

<u>ಮರುವಿಚಾರಣೆಃ</u> ಇಲ್ಲ.

(ಸಾಕ್ಷಿದಾರರ ಹೇಳಿಕೆಯಂತೆ ನನ್ನ ಉಕ್ತಲೇಖನ ರೀತ್ಯಾ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.)

ಓದಿ ಹೇಳಿ ಕೇಳಿ ಸರಿ ಇದೆ.

5ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ದ.ಕ., ಮಂಗಳೂರು, ಕಾರ್ಯನಿರ್ವಹಣೆಃ ಪುತ್ತೂರು.